

ಪ್ರಸಿದ್ಧ ಸಂಗೀತ ವಿಧ್ವಂಸಕರ ವಂಶ ಕಣೋ ನಮ್ದು' ಎಂದು ನಕ್ಕೆ.

ಆಮೇಲೆ ಇಬ್ಬರೂ ನಮ್ಮ ಕ್ಯಾಮೆರಾಗಳನ್ನು ಹೆಗಲಿಗೆ ಸುತ್ತಿಕೊಂಡು ರೆಡಿಯಾದೆವು. ಯಾವ ಕಡೆ ಹೋಗುವುದು ಎಂಬ ನಿರ್ದಿಷ್ಟ ಗುರಿ ಇರಲಿಲ್ಲ. ಥಂಡಿ ಸಿಂಚನದ ಮಂಜಿನ ಹೊಗೆಯೊಳಗೆ ಕೆಂಪು ಬಾಯಿ ಕಳೆದು ಬಿದ್ದಿದ್ದ ಕಾಡಿನ ದಾರಿಯೊಂದು ಮಾತ್ರ ಕಾಣುತ್ತಿತ್ತು. 'ಮಿನಿವಿಟ್ ಹಕ್ಕಿಗಳು ಈ ದಾರಿಯಲ್ಲಿ ಹೋದರೆ ಸಿಕ್ಕರೂ ಸಿಗಬಹುದು. ಟ್ರೈ ಮಾಡೋಣ ನಡಿ' ಎಂದೆ.

ನಮ್ಮ ನಡಿಗೆ ಶುರುವಾಗಿ ಕೇವಲ ಐದು ನಿಮಿಷವಷ್ಟೇ ಕಳೆದಿರಬೇಕು. ಅಷ್ಟರಲ್ಲಿ ಕೆಂದೂಳಿನ ದಾರಿಯಲ್ಲಿ ಕೆಲ ಅಸ್ಪಷ್ಟ ಆಕೃತಿಗಳು ಚಲಿಸಿದಂತೆ ಕಂಡವು. ಅವು ನಮಗಿಂತ ಸಾಕಷ್ಟು ದೂರದಲ್ಲಿದ್ದವು. ಜತೆಗೆ ಮಂಜು ಮುಸುಕಿ ಅಸ್ಪಷ್ಟತೆಯೂ ಹೆಚ್ಚಿತ್ತು. ಸೂರ್ಯ ಇನ್ನೂ ಮೂಡಲು ಚೌಕಾಶಿ ಮಾಡುತ್ತಾ ಕೂತಿದ್ದ. ಯಾವಾಗಲೂ ಫಜೀತಿ ಎಂದರೆ ಸ್ವಷ್ಟ ಬೆಳಕು ಮೂಡುವ ಮೊದಲು ಫೋಟೊಗ್ರಫಿ ಮಾಡುವುದು ಒಂಥರ ಕಷ್ಟದ ಕಸುಬು. ಬಿಳಿಯ ಮಂಜು ಇದ್ದರೆ ಯಾವ ಚಿತ್ರ ತೆಗೆದರೂ ಕಗ್ಗತ್ತಲು ಬರುತ್ತದೆ. ಒಂದಿಷ್ಟಾದರೂ ಜನರು ಓಡಾಡುವ ಆ ದಾರಿಯ ಅರ್ಧ ಫರ್ಲಾಂಗ್ ಆಚೆಗೆ ಕೆಲ ಮನೆಗಳೂ ಇದ್ದವು. ಹೀಗಾಗಿ ಅವು ಬೀದಿ ನಾಯಿಗಳಿರಬೇಕೆಂದು ಊಹಿಸಿದೆ. ಇಲ್ಲವೇ ಅವು ನರಿಗಳಿರಬಹುದು, ಒಂದೊಮ್ಮೆ ಕೆನ್ನಾಯಿಗಳಿದ್ದರೂ ಆಶ್ಚರ್ಯವಿಲ್ಲ ಎನಿಸಿತು. ಆಗ ಅವಿನಾಶ್ 'ನಿನ್ನೆ ರಾತ್ರಿ ಗೂಬೆ ಫೋಟೊ ತೆಗೆಯಲು ಐ.ಎಸ್.ಓ. ಜಾಸ್ತಿ ಮಾಡ್ಕೊಂಡಿದ್ರಿ ಅದನ್ನ ಸರಿ ಮಾಡ್ಕೊಳ್ಳಿ ಸಾರ್' ಎನ್ನುತ್ತಿದ್ದ.

ಕ್ಯಾಮೆರಾ ಸೆಟ್ಟಿಂಗ್ ಬದಲಿಸಿ ದೂರದ ಆ ಅಸ್ಪಷ್ಟ ಓಡಾಟಗಳನ್ನು ಒಮ್ಮೆ ಕ್ಲಿಕ್ಕಿಸಿ ನೋಡಿದೆ. ಒಮ್ಮೆಗೆ ನನ್ನ ರಕ್ತ ತಣ್ಣಗಾಗಿ ಹೋಯಿತು. ಏನು ಮಾಡುವುದೆಂದು ತೋಚದೆ 'ಅವಿ ಏನೋ ಇದು' ಎಂದು ಪಿಸುಗುಟ್ಟಿದೆ. ನನ್ನಂತೆಯೇ ಅದರ ಚಿತ್ರ ತೆಗೆದ ಅವನೂ ಗಾಬರಿಗೊಂಡಿದ್ದ. ನಮ್ಮ ಊಹೆ ಸರಿಯಾಗಿ ಕೈ ಕೊಟ್ಟಿತ್ತು. ಅಲ್ಲಿದ್ದದ್ದು ಮತ್ತೇನೂ ಅಲ್ಲ! ಪಕ್ಕಾ ಚಿರತೆಗಳ ಗ್ಯಾಂಗ್! 'ಓಹೋ ನಾವಿಬ್ಬರು ಸರಿಯಾಗೇ ಸಿಕ್ಕಿ ಹಾಕಿಕೊಂಡಿದ್ದೇವೆ ಕಣೋ' ಎಂದು ಹೆದರಿಕೆಯಲ್ಲೇ ಗೊಣಗಿದೆ.